# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :** 772(886)

**ಸದಸ್ಯರ ಹೆಸರು :** ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳು ಕ್ಷೇತ್ರ)

**ಉತ್ತರಿಸಬೇಕಾದ ದಿನಾಂಕ :** 19.08.2025

**ಉತ್ತರಿಸುವವರು :** ಪೌರಾಡಳಿತ ಮತ್ತು ಹಜ್ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಮನಗರ ನಗರಸಭೆಯಲ್ಲಿ ಆಸ್ತಿಗಳ ಕಂದಾಯ ಪಾವತಿ ವಿಳಂಬಕ್ಕೆ ತಿಂಗಳಿಗೆ ಶೇಕಡ 02 ರಷ್ಟು ಬಡ್ಡಿ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಪ್ರಕರಣ 105 ರನ್ವಯ ಆಸ್ತಿ ತೆರಿಗೆಯನ್ನು ಆರ್ಥಿಕ ವರ್ಷದ ಪ್ರಾರಂಭದ 3 ತಿಂಗಳಲ್ಲಿ ಪಾವತಿಸಬೇಕಾಗಿರುತ್ತದೆ. ವಿಳಂಬವಾಗಿ ಆಸ್ತಿ ತೆರಿಗೆ ಪಾವತಿಸಿದಲ್ಲಿ ಮಾಸಿಕ 2 % ರಷ್ಟು ದಂಡದೊಂದಿಗೆ ಪಾವತಿಸಬೇಕಾಗಿದೆ.</td></tr>
<tr><td>ಆ)</td><td>ಒಂದು ಸರ್ಕಾರಿ ಸಂಸ್ಥೆ ಒಂದು ತಿಂಗಳಿಗೆ ಶೇಕಡ 2 ದರದಲ್ಲಿ ಬಡ್ಡಿ ವಿಧಿಸುವುದು ಆರ್ಥಿಕ ಇಲಾಖೆಯ ಆದೇಶಕ್ಕೆ ಅಥವಾ ಆರ್ಥಿಕ ಸಂಹಿತೆಗೆ ಅಥವಾ ಭಾರತೀಯ ರಿಸರ್ವ್ ಬ್ಯಾಂಕ್ ನಿಯಮಾವಳಿಗೆ ವಿರೋಧವಲ್ಲವೇ;</td><td rowspan="2">ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಪ್ರಕರಣ 105 ರನ್ವಯ ಆರ್ಥಿಕ ವರ್ಷದ ಪ್ರಾರಂಭದ 3 ತಿಂಗಳ ಒಳಗೆ ದಂಡರಹಿತವಾಗಿ ಆಸ್ತಿ ತೆರಿಗೆ ಪಾವತಿಸಬೇಕಾಗುತ್ತದೆ ಮತ್ತು ಸದರಿ ನಿಯಮಗಳನ್ವಯ ವಿಳಂಬ ಪಾವತಿಗೆ ಮಾಸಿಕ 2% ರಷ್ಟು ದಂಡ ಪಾವತಿಸಬೇಕಾಗುತ್ತದೆ</td></tr>
<tr><td>ಇ)</td><td>ಆಯಾ ಸಾಲಿನ ಕಂದಾಯ ತೆರಿಗೆಯನ್ನು ಆಯಾ ಆರ್ಥಿಕ ವರ್ಷದ ಮಾರ್ಚ್ ಅಂತ್ಯದವರೆಗೆ ಪಾವತಿಸಲು ಅವಕಾಶವಿದ್ದರೂ ಜುಲೈ ತಿಂಗಳಿನಿಂದಲೇ ಶೇಕಡ 2ರ ದರದ ಬಡ್ಡಿಯನ್ನು ವಿಧಿಸುವುದು ಸಮಂಜಸವೇ;</td></tr>
<tr><td>ಈ)</td><td>ಮುಂದುವರೆದು ಖಾಲಿ ನಿವೇಶನಗಳಿಂದ ಯಾವುದೇ ಘನ ತ್ಯಾಜ್ಯ ಉತ್ಪತ್ತಿ ಆಗದಿದ್ದರೂ ಘನ ತ್ಯಾಜ್ಯ ತೆರಿಗೆಯನ್ನು ವಿಧಿಸುವುದರ ಉದ್ದೇಶವೇನು ಅಥವಾ ಸಮಂಜಸವೇ;</td><td>ಘನ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 ಪ್ರಕಾರ, ತ್ಯಾಜ್ಯ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿ ಕಾರ್ಯಗಳಿಗೆ ಎಲ್ಲ ತ್ಯಾಜ್ಯ ಉತ್ಪಾದಕರರಿಗೆ ಬಳಕೆದಾರ ಶುಲ್ಕ ವಿಧಿಸಬೇಕಿರುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ಪೌರಸಭೆಗಳ ಘನ ತ್ಯಾಜ್ಯ ನಿರ್ವಹಣೆ ಮಾದರಿ ಉಪವಿಧಿಗಳು, 2019 ರಂತೆ ನಗರ ಸ್ಥಳೀಯ ಸಂಸ್ಥೆಗಳು ವ್ಯಾಪ್ತಿಯಲ್ಲಿ ಎಲ್ಲಾ ಮನೆಗಳಿಗೆ (ಖಾಲಿ ಜಾಗ ಮಾಲೀಕರನ್ನೂ ಒಳಗೊಂಡಂತೆ), ಅಪಾರ್ಟ್ಮೆಂಟ್, ಖಾಸಗಿ ಸಂಸ್ಥೆಗಳು, ವಾಣಿಜ್ಯ ಸಂಕೀರ್ಣಗಳು, ಇತ್ಯಾದಿ ಎಲ್ಲಾ ತ್ಯಾಜ್ಯ ಉತ್ಪಾದಕರಿಗೂ ಶುಲ್ಕ ವಿಧಿಸಲಾಗುತ್ತಿದೆ.</td></tr>
</table>

| | | |
|---|---|---|
| | | ಸಾಮಾನ್ಯವಾಗಿ ಖಾಲಿ ನಿವೇಶನಗಳಲ್ಲಿ ಗಿಡ ಗಂಟೆಗಳು ಬೆಳೆದು ಕ್ರಮೇಣ ತ್ಯಾಜ್ಯವಾಗಿ ಪರಿವರ್ತನೆಯಾಗಿ ಸುತ್ತಮುತ್ತಲಿನ ಪರಿಸರ ಹಾಗೂ ಸಾರ್ವಜನಿಕರ ಆರೋಗ್ಯಕ್ಕೆ ಹಾನಿ ಉಂಟಾಗಬಹುದಾಗಿದ್ದು, ಇದನ್ನು ತಡೆಗಟ್ಟಲು ಖಾಲಿ ನಿವೇಶನಗಳ ಮಾಲೀಕರಿಗೂ ಬಳಕೆದಾರ ಶುಲ್ಕವನ್ನು ವಿಧಿಸಿ ನಗರಸ್ಥಳೀಯ ಸಂಸ್ಥೆಯಿಂದ ಖಾಲಿ ನಿವೇಶನಗಳಲ್ಲಿನ ಗಿಡ ಗಂಟೆಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ. |
| ಉ) | ಮನೆ ಮನೆಗೆ "ಇ ಖಾತೆ" ಅಭಿಯಾನದಡಿ ವಾರ್ಡವಾರು ಸ್ವೀಕರಿಸಿದ ಅರ್ಜಿಗಳೆಷ್ಟು ಮತ್ತು ಸ್ಥಳದಲ್ಲಿ ವಿಲೇ ಮಾಡಿದ ಪ್ರಕರಣಗಳೆಷ್ಟು; | ರಾಮನಗರ ನಗರಸಭೆಗೆ ದಿನಾಂಕ: 17.02.2025 ರಿಂದ ಒಟ್ಟು 2,950 ಅರ್ಜಿಗಳು ಸ್ವೀಕೃತವಾಗಿರುತ್ತವೆ, ಅದರಲ್ಲಿ 2,679 ಅರ್ಜಿಗಳನ್ನು ಸರ್ಕಾರದ ಸುತ್ತೋಲೆಯಂತೆ ನಿಗಧಿತ ಕಾಲಮಿತಿಯಲ್ಲಿ ವಿಲೇಮಾಡಲಾಗಿರುತ್ತದೆ ಸದರಿ ಮಾಹಿತಿಯನ್ನು, **ಅನುಬಂಧದಲ್ಲಿ ನೀಡಲಾಗಿದೆ**. |
| ಊ) | ಆಸ್ತಿಗಳ ಕಂದಾಯ ಪಾವತಿಗಳ ಬಗ್ಗೆ ತಿಂಗಳಿಗೆ ಶೇಕಡ 02 ಬಡ್ಡಿ ಮತ್ತು ಖಾಲಿ ನಿವೇಶನಗಳ ಘನ ತ್ಯಾಜ್ಯ ತೆರಿಗೆಯನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದೇ? | ಈ ರೀತಿಯ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಇ-ಸಂಖ್ಯೆ: ನಅಇ 204 ಜಿಇಎಲ್ 2025 (ಇ)

**( ರಹೀಂ ಖಾನ್ )**
ಪೌರಾಡಳಿತ ಮತ್ತು ಹಜ್ ಸಚಿವರು

# ಅನುಬಂಧ-01

## ರಾಮನಗರ ನಗರಸಭೆ, ಮನೆ-ಮನೆ ಇ-ಖಾತಾ ಅಭಿಯಾನದಲ್ಲಿ ಸ್ವೀಕರಿಸಿದ ಅರ್ಜಿಗಳ ವಿವರ.

| ವಾರ್ಡ್ ನಂ | ಸ್ವೀಕರಿಸಿದ ಅರ್ಜಿಗಳು | ಸ್ಥಳದಲ್ಲೇ ವಿಲೇಮಾಡಲಾದ ಅರ್ಜಿಗಳ ವಿವರ | ಷರಾ |
|---|---|---|---|
| 1 | 26 | 18 | ಇ-ಆಸ್ತಿ ತಂತ್ರಾಂಶದ ಸಮಸ್ಯೆಯಿಂದ ಉಳಿದ ಅರ್ಜಿಗಳನ್ನು ಸ್ಥಳದಲ್ಲೇ ವಿಲೇ ಮಾಡಲು ವಿಳಂಭವಾಗಿರುತ್ತದೆ. |
| 2 | 14 | 7 | |
| 3 | 3 | 3 | |
| 4 | 5 | 5 | |
| 5 | 8 | 8 | |
| 6 | 25 | 0 | |
| 7 | 30 | 0 | |
| 8 | 10 | 0 | |
| 9 | 1 | 0 | |
| ಒಟ್ಟು | 122 | 41 | |

ತಮ್ಮ ವಿಶ್ವಾಸಿ,

ಪೌರಾಯುಕ್ತರು,
ನಗರಸಭೆ, ರಾಮನಗರ.

ಸಹಾಯಕ ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು